ಓ.ಎಸ್.ನಂ.188/2016

ಪಿ ಡಬ್ಲ್ಯೂ ಃ 2

ದಿನಾಂಕ 25-07-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಆರ್ ಕೆ ವಕೀಲರಿಂದಃ

ನಾನು ಪದವೀಧರ. ನಾನು ನಮ್ಮ ಊರಿಗೆ ಬಂದು ಹೋಗಿ ಮಾಡುತ್ತೇನೆ. ದಾವಾಸ್ತಿಯ ಮಾಹಿತಿ ಇದೆ. ದಿಃ 26-09-2011 ರಲ್ಲಿ ದಾವಾಸ್ತಿಯನ್ನು ಕ್ರಯ ಮಾಡಿಕೊಂಡಿದ್ದೇನೆ. ದಾವಾಸ್ತಿಯ ಸರ್ವೆ ನಂ.184/ಆರ್/1. ದಾವಾಸ್ತಿಯ ಪೂರ್ವಕ್ಕೆ ರಾಮಪ್ಪ ಕಂಬಳಿ ಪಶ್ಚಿಮಕ್ಕೆ ಮಹದೇವಪ್ಪ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಶಂಕರಗೌಡ ಇವರ ಆಸ್ತಿ ಇದೆ. ಸತೀಶ, ಶಿವಾನಂದಗೌಡ ಇವರಿಂದ ದಾವಾಸ್ತಿಯನ್ನು ಕ್ರಯ ಮಾಡಿಕೊಂಡಿದ್ದೇನೆ. ನಾನೇ ದಾವಾಸ್ತಿಯ ಸ್ವಾಧೀನದಲ್ಲಿದ್ದೇನೆ. ಕ್ರಯ ಪತ್ರವನ್ನು ಸಲ್ಲಿಸಿದ್ದೇನೆ. ದಾವಾಸ್ತಿ ಖುಷ್ಕಿ ಜಮೀನು ಸಾಗುವಳಿಗೆ ಯೋಗ್ಯವಾಗಿದೆ. ದಾವಾಸ್ತಿ ಭೂ ಪರಿವರ್ತನೆ ಆಗಿಲ್ಲ. 2013 ರಲ್ಲಿ ದಾವಾಸ್ತಿಗೆ ವಿಪಿಸಿ ನಂ.70 ಎಂದು ನೀಡಿದ್ದಾರೆ. ದಾವಾಸ್ತಿಯ ನಕಾಶೆಯನ್ನು ಸಲ್ಲಿಸಿಲ್ಲ. ದಾವಾಸ್ತಿಯ ಉತ್ತರದ ರಸ್ತೆ ಆದ ಮೇಲೆ ಪ್ರತಿವಾದಿಗಳಿಗೆ ಸೇರಿದ ಆಸ್ತಿ ಇದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಆ ಆಸ್ತಿಯಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ, ಅದು ನಮ್ಮ ಆಸ್ತಿ ಎನ್ನುತ್ತಾರೆ. ಪ್ರತಿವಾದಿಗಳ ಆಸ್ತಿಯ ಪೂರ್ವಕ್ಕೆ ನಿಮಗೆ ಸೇರಿದ ಆಸ್ತಿ ಇದೆ ಎಂದರೆ ಸರಿಯಲ್ಲ. 15 ಗುಂಟೆ ವಿಸ್ತೀರ್ಣವನ್ನು ಕ್ರಯ ಮಾಡಿಕೊಂಡಿದ್ದೀರಿ ಎಂದರೆ ಸರಿ. ದಾವಾಸ್ತಿಯ ಪೂರ್ವದಲ್ಲಿರುವ ಸ್ವತ್ತನ್ನು 6ನೇ ಪ್ರತಿವಾದಿಗೆ ಕ್ರಯ ಮಾಡಿದ್ದೀರಿ ಎಂದರೆ ಸರಿ. ನಿಮಗೆ 10 ಗುಂಟೆ ವಿಸ್ತೀರ್ಣದ ಆಸ್ತಿ ಉಳಿದಿದೆ ಎಂದರೆ ಸರಿ. ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಲು •ಯಾವುದೇ ಸಕಾರಣಗಳು ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನೀವೇ ಸ್ವಾಧೀನ ಇದ್ದೀರಿ ಎಂದರೆ ಸರಿ. ಪ್ರತಿವಾದಿಗಳಿಂದ ದಾವಾಸ್ತಿಯ ನಿಮ್ಮ ಸ್ವಾಧೀನಕ್ಕೆ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ದ ದೂರು ಸಲ್ಲಿಸಿಲ್ಲ, ದಾವೆ ಸಲ್ಲಿಸಿದ್ದೇವೆ ಎನ್ನುತ್ತಾರೆ. 4ನೇ ಪ್ರತಿವಾದಿ ಕ್ರಯ ಮಾಡಿದ ಸ್ವತ್ತನ್ನು ನೀವು ಖರೀದಿಸಬೇಕೆಂದಿದ್ದೀರಿ ಎಂದರ ಸುಳ್ಳು. ದಾವಾಸ್ತಿಯ ಸುತ್ತಲೂ ಮನೆ, ಜಮೀನುಗಳು ಇವೆ ಎಂದರೆ ಸರಿ. ನಾನೇ ದಾವೆಗೆ ಮಾಹಿತಿ ನೀಡಿದ್ದೇನೆ, ಅದರಲ್ಲಿರುವ ಸಂಗತಿಗಳು ಸತ್ಯವಾಗಿವೆ. ದಾವಾಸ್ತಿ ಪ್ರತಿವಾದಿಗಳಿಗೆ ಸಂಬಂಧಿಸಿದಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳಿಗೆ ಸೇರಿದ ಆಸ್ತಿ ದಾವಾಸ್ತಿಯ ಬಳಿ ಇಲ್ಲ ಎಂದರೆ ಸರಿ. ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 6ನೇ ಖಂಡಿಕೆಯಲ್ಲಿ ಬರೆದಿರುವ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನಷ್ಟ ಭರಿಸಲು ನೀವು ಬಾದ್ಯಸ್ಥರು ಎಂದರೆ ಸರಿಯಲ್ಲ. ಓ ಎಸ್ ನಂ.83/2013 ರಂತೆ ಈ ದಾವಾಸ್ತಿಯ ಸಂಬಂಧ ನಡೆದಿತ್ತು ಎಂದರೆ ಸರಿ. ಆ ದಾವೆಗೆ ನೀವೇ ಮಾಹಿತಿ ನೀಡಿದ್ದೀರಿ ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಗಳನ್ನು ಆ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿ. ಸದರಿ ದಾವೆ ಸಲ್ಲಿಸಲು ಸಕಾರಣಗಳು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಆಸ್ತಿ ನಂ.137/1 ಇದೆ

ಎಂದು ಸಾಧಿಸುತ್ತಿದ್ದಾರೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಯಾವುದೇ ಆಸ್ತಿ, ದಾಖಲೆಗಳು ಇರುವುದಿಲ್ಲ ಎಂಬ ಹಿಂಬರಹ ನೀಡಿದ್ದಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.